ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560001.

ದೂರವಾಣಿ:22268390, ಫ್ಯಾಕ್ಸ್:22266481
ಅಂಚೆ ಪೆಟ್ಟಿಗೆ ನಂ.5056
ಇ-ಮೇಲ್- kpsc-ka@nic.in

ಕರ್ನಾಟಕ ಲೋಕ ಸೇವಾ ಆಯೋಗದ ಕಛೇರಿ
"ಉದ್ಯೋಗ ಸೌಧ"
ಬೆಂಗಳೂರು-560 001.
ವೆಬ್ ಸೈಟ್: http://kpsc.kar.nic.in

ಸಂಖ್ಯೆ: ಪಿಎಸ್ ಸಿ 490 ಆರ್ ಟಿಬಿ-4/2023-24/2142

ದಿನಾಂಕ:18-12-2023

**"ಪರೀಕ್ಷಾ ತುರ್ತು"**

ಇಂದ:

ಕಾರ್ಯದರ್ಶಿ
ಕರ್ನಾಟಕ ಲೋಕ ಸೇವಾ ಆಯೋಗ
ಬೆಂಗಳೂರು.

ಇವರಿಗೆ:

ಪೊಲೀಸ್ ಮಹಾನಿರ್ದೇಶಕರು
ನೃಪತುಂಗ ರಸ್ತೆ,
ಬೆಂಗಳೂರು-01

**ಮಾನ್ಯರೇ,**

**ವಿಷಯ:** ಆಯೋಗವು ದಿನಾಂಕ:18-03-2023ರಲ್ಲಿ ಅಧಿಸೂಚಿಸಲಾದ ಸಹಕಾರ ಇಲಾಖೆಯ, ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿನ ಸಹಕಾರ ಸಂಘಗಳ ನಿರೀಕ್ಷಕರ 53 (ಕಲ್ಯಾಣ ಕರ್ನಾಟಕ ವೃಂದ) ಹುದ್ದೆಗಳಿಗೆ ದಿನಾಂಕ: 30-12-2023ರಂದು ನಡೆಸಲಾಗುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ.

*****

ಆಯೋಗವು ಈ ಹಿಂದೆ ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತಾವುಗಳು ನೀಡಿರುವ ಸಂಪೂರ್ಣ ಸಹಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತದೆ. ಪ್ರಸ್ತುತ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಆಯೋಗವು ದಿನಾಂಕ: 18-03-2023ರಲ್ಲಿ ಅಧಿಸೂಚಿಸಲಾದ ಗ್ರೂಪ್ 'ಸಿ' ಹುದ್ದೆಗಳಿಗೆ ದಿನಾಂಕ:30-12-2023ರಂದು ನಡೆಸಲಾಗುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಯನ್ನು ಬೆಂಗಳೂರು, ಕಲಬುರಗಿ, ರಾಯಚೂರು, ಬಳ್ಳಾರಿ, ಮೈಸೂರು, ಬೆಳಗಾವಿ, ಕೊಪ್ಪಳ, ಶಿವಮೊಗ್ಗ ಕೇಂದ್ರುಗಳಲ್ಲಿ ನಡೆಸಲು ತೀರ್ಮಾನಿಸಿದ್ದು, ಪರೀಕ್ಷಾ ಉಪಕೇಂದ್ರುಗಳ ಪಟ್ಟಿಯನ್ನುಹಾಗೂ ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

ಸಂಬಂಧಪಟ್ಟ ವಿಭಾಗೀಯ/ಜಿಲ್ಲಾ ಖಜಾನೆಗಳಿಂದ ಪರೀಕ್ಷಾ ಕೇಂದ್ರುಗಳ ಉಪಕೇಂದ್ರುಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಕೊಂಡೊಯ್ಯುವ ಮಾರ್ಗಾಧಿಕಾರಿಗಳೊಂದಿಗೆ ಓರ್ವ ಪೊಲೀಸ್ ಸಿಬ್ಬಂದಿಯನ್ನು ಹಾಗೂ ಪರೀಕ್ಷಾ ದಿನಗಳಂದು ಪರೀಕ್ಷಾ ಉಪಕೇಂದ್ರುಗಳ 200 ಮೀಟರ್ ಸುತ್ತಳತೆಯನ್ನು ನಿಷೇಧಿತ ಪ್ರದೇಶವೆಂದು ಘೋಷಿಸಬೇಕಾಗಿಯೂ, ಪರೀಕ್ಷೆ ನಡೆಯುವ ಪರೀಕ್ಷಾ ಕೇಂದ್ರುಗಳ ಹತ್ತಿರದಲ್ಲಿರುವ ಎಲ್ಲ ಜೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ಆದೇಶ ಹೊರಡಿಸಬೇಕಾಗಿಯೂ ಹಾಗೂ ಪರೀಕ್ಷಾ ಕೇಂದ್ರುಗಳ ಸುತ್ತಮುತ್ತ ಯಾವುದೇ ಸಭೆ/ಸಮಾರಂಭಗಳು ನಡೆಯುತ್ತಿದ್ದಲ್ಲಿ ಧ್ವನಿವರ್ಧಕಗಳನ್ನು ನಿರ್ಬಂದಿಸುವಂತೆಯೂ ಹಾಗೂ ಸದರಿ ಪರೀಕ್ಷಾ ಉಪಕೇಂದ್ರುಗಳ ಬಳಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಅಗತ್ಯ

......2

ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲು ಪರೀಕ್ಷೆ ನಡೆಸಲಾಗುತ್ತಿರುವ ಜಿಲ್ಲಾ ಕೇಂದ್ರಗಳ ಪೊಲೀಸ್ ವರಿಷ್ಠಾಧಿಕಾರಿಯವರಿಗೆ ಮತ್ತು ಪೊಲೀಸ್ ಆಯುಕ್ತರಿಗೆ ನಿರ್ದೇಶನ ನೀಡಬೇಕೆಂದು ಕೋರುತ್ತೇನೆ. ಆಯೋಗವು ಪರೀಕ್ಷಾ ಅಕ್ರಮವನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಭ್ಯರ್ಥಿಗಳ ತಪಾಸಣೆಯನ್ನು ನಡೆಸಲು ಖಾಸಗಿ ಏಜೆನ್ಸಿಯ ಮೂಲಕ HHMD ಉಪಕರಣಗಳ ಮೂಲಕ ಫ್ರಿಸ್ಕಿಂಗ್ ವ್ಯವಸ್ಥೆಯನ್ನು ಕೈಗೊಳ್ಳುತ್ತಿದ್ದು, ಈ ಕಾರ್ಯದಲ್ಲಿ ಪರೀಕ್ಷಾ ಕೇಂದ್ರದಲ್ಲಿ ನಿಯೋಜಿತರಾಗುವ ಪೊಲೀಸ್ ಸಿಬ್ಬಂದಿಗಳು ಸಹ ಭಾಗವಹಿಸಿ ಅಭ್ಯರ್ಥಿಗಳ ತಪಾಸಣೆಯಲ್ಲಿ ಸಹಕರಿಸುವಂತೆ ಸಿಬ್ಬಂದಿಗಳಿಗೆ ಸೂಚನೆ ನೀಡುವಂತೆ ಕೋರುತ್ತೇನೆ. ಈ ಕಾರ್ಯವನ್ನು ಅತ್ಯಂತ ಜರೂರು ಎಂದು ಪರಿಗಣಿಸಿ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ.

ಆಯೋಗದ ದಿನಾಂಕ:30-12-2023ರ ಸ್ಪರ್ಧಾತ್ಮಕ ಪರೀಕ್ಷೆಯು ಪಾರದರ್ಶಕತೆಯಿಂದ ಸುಗಮವಾಗಿ ನಡೆಯಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತಂತೆ ಚರ್ಚಿಸಲು ದಿನಾಂಕ:27-12-2023 ರಂದು ಅಪರಾಹ್ನ 03.00 ಗಂಟೆಗೆ Virtual ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಸಭೆಯಲ್ಲಿ ಸಲಹೆ ಸೂಚನೆಗಳನ್ನು ನೀಡಲು ತಮ್ಮ ಪ್ರತಿನಿಧಿಯೊಬ್ಬರು ಹಾಜರಾಗುವಂತೆ ಕೋರಿದೆ. ಸದರಿ ಪರೀಕ್ಷೆಯನ್ನು ತಮ್ಮ ಸಹಕಾರದೊಂದಿಗೆ ಅತ್ಯಂತ ಪಾರದರ್ಶಕವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸುವ ನಿಟ್ಟಿನಲ್ಲಿ ತಮ್ಮ ಸಂಪೂರ್ಣ ಸಹಕಾರವನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ

ಸಹಿ/-
(ಕೆ.ಎಸ್.ಲತಾಕುಮಾರಿ)
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ.

**ಪ್ರತಿಯನ್ನು:-**

1. ಪೊಲೀಸ್ ವರಿಷ್ಠಾಧಿಕಾರಿಗಳು/ಆಯುಕ್ತರು,.......................ಜಿಲ್ಲೆ ಇವರ ಮಾಹಿತಿಗಾಗಿ,